

ಅರುಣ ಪಿ. ಭಟ್ಟ



## ವಾರಭವಿಷ್ಯ: 27.07.2023ರಿಂದ 02.08.2023ರವರೆಗೆ




ಬಹುದಿನದಿಂದ ನಿರೀಕ್ಷಿಸಿದ ಮಕ್ಕಳ ಕೆಲಸದ ಸಮಸ್ಯೆ ಬಗೆಹರಿಯುವುದು. ಸರ್ಕಾರದಿಂದ ಬರುವ ಹಣ ಸಕಾಲಕ್ಕೆ ಬರುವುದು. ಸಂಘ ಸಂಸ್ಥೆಗಳಿಂದ ನಿರೀಕ್ಷಿತ ಲಾಭವಿದೆ. ವಾರಾಂತ್ಯದಲ್ಲಿ ಅನಿರೀಕ್ಷಿತ ಜನವಿರೋಧ ಎದುರಾಗಬಹುದು. ಭೂಮಿ ಖರೀದಿ ವ್ಯವಹಾರಗಳಿಗೆ ಉತ್ತಮ ಸಮಯ. ಆರೋಗ್ಯ ಉತ್ತಮವಾಗಿರುವುದು. ಮನೆಗೆ ಹೊಸ ವಸ್ತುಗಳನ್ನು ಖರೀದಿಸುವಿರಿ. ಶುಭದಿನ 27. ಆದಿತ್ಯ ಹೃದಯ ಪಠಿಸಿರಿ.




ವಾಹನ ಖರೀದಿಯಲ್ಲಿ ಜಾಗ್ರತೆ ವಹಿಸಿರಿ. ಬಹುದಿನದ ನಂತರ ಸಾಮಾಜಿಕ ಸ್ಥಾನಮಾನದಲ್ಲಿ ಉನ್ನತಿ ಸಾಧಿಸುವಿರಿ. ಲೇಖಕರಿಗೆ ಶುಭವಾರ್ತೆ, ಆರೋಗ್ಯ ಸುಧಾರಣೆ. ವಿವಾಹ ಅಪೇಕ್ಷೆ ಇರುವವರಿಗೆ ಉತ್ತಮ ಅವಕಾಶ. ಹೊಸಮನೆ ಕೆಲಸಗಳು ಅಬಾಧಿತವಾಗಿ ನಡೆಯುತ್ತವೆ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು. ವಾರಾಂತ್ಯದಲ್ಲಿ ಹೊಸ ಕೆಲಸದ ಆಲೋಚನೆ. ಶುಭದಿನ 29. ವಿಷ್ಣು ಸಹಸ್ರನಾಮ ಸ್ತೋತ್ರ ಪಠಿಸಿರಿ.




ವಾರದ ಪ್ರಾರಂಭದಲ್ಲಿ ಕಾಲುನೋವು ಉಲ್ಬಣಗೊಳ್ಳುವುದು. ನೆಂಟರ ಆಗಮನದಿಂದ ಮಹತ್ವದ ಚರ್ಚೆ ಫಲಪ್ರದ. ಸಹೋದರರ ನೈಜಮುಖದ ಪರಿಚಯವಾಗುವುದು. ಕೆಲಸದವರಿಂದ ಸಹಾಯ. ಖರೀದಿಯಲ್ಲಿ ಲಾಭ. ಅವಿವಾಹಿತ ವಧೂವರರಿಗೆ ವಿವಾಹ ಯೋಗ. ನಿರುದ್ಯೋಗಿ ಪದವೀಧರರಿಗೆ ಉದ್ಯೋಗ ಯೋಗ. ಆರೋಗ್ಯದಲ್ಲಿ ಚೇತರಿಕೆ. ಶುಭದಿನ 30. ನಾಗ ಪ್ರತಿಮಾ ಪೂಜೆ ಮಾಡಿರಿ.




ಅಸಭ್ಯ ಜನರ ಕುಟುಂಬ ಪ್ರವೇಶದಿಂದ ಕಿರಿಕಿರಿ. ತಂದೆಯೊಡನೆ ಮನಸ್ತಾಪ ಸಾಧ್ಯತೆ. ವಾಹನ ದುರಸ್ತಿ ಕಾರ್ಯ ಇಲ್ಲವೆ, ವಾಹನ ಕಳ್ಳತನವಾಗುವ ಸಾಧ್ಯತೆ. ಕೃಷಿಮೂಲದಿಂದ ಧನಲಾಭ. ಸಾಮಾಜಿಕ ಯಶಸ್ಸು. ಸಂಘ ಸಂಸ್ಥೆಗಳ ಪ್ರಮುಖ ಹುದ್ದೆಗೇರುವ ಸಾಧ್ಯತೆ. ಹತ್ತಿ ಬಟ್ಟೆ ನೂಲು ವ್ಯಾಪಾರ ವ್ಯವಹಾರಸ್ಥರಿಗೆ ಉತ್ತಮ ಲಾಭ. ವಿದ್ಯಾರ್ಥಿಗಳಿಗೆ ಯಶಸ್ಸು. ಶುಭದಿನ 29. ಲಕ್ಷ್ಮೀ ನರಸಿಂಹ ಸ್ತೋತ್ರ ಪಠಿಸಿರಿ.




ವಾರದ ಪ್ರಾರಂಭದಲ್ಲಿ ಮಾನಸಿಕ ಸ್ವಾಸ್ಥ್ಯ ಕೆಡುವ ಘಟನೆ ಜರುಗುವುದು. ಹೊಟ್ಟೆ ನೋವಿನ ಉಪದ್ರವಗಳು ಕಾಣಿಸಲಿವೆ. ಅವಮಾನಕರ ಅಪವಾದ ಪ್ರಸಂಗ ಬರಬಹುದು. ನಂಬಿಕಸ್ಥ ಜನರೇ ಕೈಕೊಡುವರು. ಕೋರ್ಟ್ ವ್ಯಾಜ್ಯಗಳಲ್ಲಿ ಯಶಸ್ಸು ಕಷ್ಟವಾಗಲಿದೆ. ಭೂ ವ್ಯವಹಾರ ಹಣಕಾಸು ವ್ಯವಹಾರಗಳಿದ್ದಲ್ಲಿ ಈ ವಾರ ಯಾವುದೇ ಒಪ್ಪಂದ ಮಾಡದಿರಿ. ಶುಭದಿನ 01. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಹಲವು ಖರ್ಚುಗಳು ಒಟ್ಟಿಗೆ ಬರಲಿವೆ. ಅನಿರೀಕ್ಷಿತ ಪ್ರವಾಸ ಘಟಿಸುತ್ತದೆ. ವಿವಾಹ ಕಾರ್ಯಕ್ಕೆ ನೆರವಾಗುವುದರಿಂದ ಸಂತಸ. ಆಳುಕಾಳುಗಳು ಕೈಕೊಡಬಹುದು. ಕೌಟುಂಬಿಕ ಸುವಾರ್ತೆ. ಮನೆಗೆ ಹಳೆಯ ಮಿತ್ರರ ಆಗಮನ. ಸಂತಸದ ವಾತಾವರಣ. ಸರ್ಕಾರಿ ಉದ್ಯೋಗಸ್ಥರಿಗೆ ಪ್ರಮೋಷನ್ ಯೋಗ. ಎಲೆಕ್ಟ್ರಾನಿಕ್ ವಸ್ತು ಮಾರಾಟಗಾರರಿಗೆ ಉತ್ತಮ ಲಾಭ. ಶುಭದಿನ 30. ಲಕ್ಷ್ಮೀ ನಾರಾಯಣ ಹೃದಯ ಪಠಿಸಿರಿ.




ವ್ಯಾಪಾರ ವ್ಯವಹಾರಸ್ಥರಿಗೆ ಉತ್ತಮ ವಾರ. ಎಲ್ಲ ಮೂಲಗಳಿಂದ ಧನಲಾಭ. ಜೀವನದ ಮಹತ್ವಾಕಾಂಕ್ಷೆ ಪೂರ್ಣಗೊಳ್ಳುವ ಸಮಯ. ಹಳೆಯ ಮಿತ್ರರು ಜೊತೆಯಾಗುವರು. ಸಂತಸ ಸಮಾರಂಭಕ್ಕಾಗಿ ಖರ್ಚು. ಹೊಸ ಸ್ನೇಹಿತರು ಸಿಗುವರು. ಸಂತಾನ ಪ್ರಾಪ್ತಿ. ಹಣಕಾಸು ಸಂಸ್ಥೆಯಲ್ಲಿರುವವರಿಗೆ ಆಭರಣ ತಯಾರಿಕರಿಗೆ ವರ್ತಕರಿಗೆ ಉತ್ತಮ ಸಮಯ. ಶುಭದಿನ 30. ಸುಬ್ರಹ್ಮಣ್ಯ ಸ್ವಾಮಿಗೆ ಕ್ಷೀರಾಭಿಷೇಕ ಮಾಡಿರಿ.




ಹಲವು ದಿನಗಳಿಂದ ಬಯಸಿದ ಅಧಿಕಾರ ಪ್ರಾಪ್ತಿಯಿಂದ ಸಂತಸ. ವಿಶೇಷ ಅಲಂಕಾರಿಕ ವಸ್ತು ಖರೀದಿ ಸಾಧ್ಯತೆ. ಕ್ರೀಡಾಪಟುಗಳಿಗೆ ಉತ್ತಮ ಅವಕಾಶ. ಕೌಟುಂಬಿಕ ಖರ್ಚು ಹಿಡಿತಕ್ಕೆ ಬರುವುದು. ಹಿರಿಯರಿಂದ ಪ್ರಶಂಸೆ. ತಂದೆ ತಾಯಿಗಳ ಆರೋಗ್ಯದಲ್ಲಿ ಸುಧಾರಣೆ. ಮನೆಗೆ ನೆಂಟರಿಷ್ಟರ ಆಗಮನದಿಂದ ಸಂತಸ. ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ಸು. ಶುಭದಿನ 02. ಶನಿಸ್ತೋತ್ರ ಪಠಿಸಿರಿ.




ಬಂಧುಗಳ ಸಹಕಾರದಿಂದ ಸಂಕಟ ಮುಕ್ತಿಯಾಗಿ ನಿರಾಳವಾಗುವಿರಿ. ಪತ್ನಿಯ ಮನೋಕಾಮನೆ ಪೂರ್ಣವಾಗುವುದು. ದೂರಪ್ರವಾಸಕ್ಕೆ ಸಿದ್ಧತೆ. ನಾಗರಿಕರಿಂದ ಪ್ರಶಂಸೆಯ ನುಡಿ. ಹಳೆಯ ಬರತಕ್ಕ ಬಾಕಿ ಹಣ ವಾಪಸ್ ಬರುವುದು. ಹೊಸದಾಗಿ ಉದ್ಯಮ ಪ್ರಾರಂಭಿಸುವವರಿಗೆ ಉತ್ತಮ ಸಮಯ. ವಿದ್ಯಾರ್ಥಿಗಳಿಗೆ ಮಿಶ್ರ ಫಲ. ಶುಭದಿನ 28. ಕಾಲಭೈರವನ ಸೇವೆ ಮಾಡಿರಿ.




ತಾಪತ್ರಯಗಳ ನಡುವೆಯೂ ಹಮ್ಮಿಕೊಂಡ ಕಾರ್ಯವನ್ನು ಮಾಡಿ ಮುಗಿಸುವಿರಿ ಮತ್ತು ಈ ಮೂಲಕ ನಿಮ್ಮನ್ನು ವಿರೋಧಿಸುತ್ತಿದ್ದವರ ಮನದಲ್ಲೂ ಸಂತಸ ಸಂಭ್ರಮವನ್ನುಂಟು ಮಾಡುವಿರಿ. ಸಹನೆಯಿಂದ ವಿಶೇಷ ಜನಪ್ರಿಯತೆಯನ್ನು ಗಳಿಸುವಿರಿ. ಇದರೊಂದಿಗೆ ಮಾನ ಸನ್ಮಾನಗಳು ಕೂಡ ದೊರೆಯುತ್ತದೆ. ಬರಬೇಕಾಗಿದ್ದ ಹಣ ಬರುವುದು. ಶುಭದಿನ 30. ಆಂಜನೇಯ ಸ್ತೋತ್ರವನ್ನು ತಪ್ಪದೆ ಪಠಿಸಿ.




ಮಕ್ಕಳೊಂದಿಗೆ ಸಮಯ ಕಳೆಯುವುದು ಮುಖ್ಯ. ಕೇವಲ ಒಂದೇ ಒಂದು ಉತ್ತಮ ಕೆಲಸದಿಂದ ನಿಮ್ಮ ಶತ್ರುಗಳು ನಿಮ್ಮ ಸ್ನೇಹಿತರಾಗಬಹುದು. ನೀವು ಸಾಕಷ್ಟು ಆಸಕ್ತಿದಾಯಕ ಆಮಂತ್ರಣಗಳನ್ನು ಪಡೆಯುತ್ತೀರಿ ಮತ್ತು ಒಂದು ಅಚ್ಚರಿಯ ಕೊಡುಗೆಯೂ ನಿಮಗೆ ಸಿಗಬಹುದು. ನಿಮ್ಮ ಪ್ರೀತಿಪಾತ್ರರು ನಿಮ್ಮ ಯೋಜನೆಯನ್ನು ಹಾಳುಮಾಡಬಹುದು, ತಾಳ್ಮೆ ಕಳೆದುಕೊಳ್ಳಬೇಡಿ. ಶುಭದಿನ 29. ಹನುಮಾನ್ ಚಾಲೀಸ್ ಓದಿರಿ.




ನಿಮ್ಮ ವೃತ್ತಿ ಜೀವನದಲ್ಲಿ ಸಾಕಷ್ಟು ಗಂಭೀರವಾಗಿ ಕೆಲಸ ಮಾಡುವಿರಿ ಮತ್ತು ಏನಾದರೂ ವಿಶೇಷವಾದುದನ್ನು ಸಾಧಿಸುವಿರಿ. ನಿಮ್ಮ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ ಆದರೆ ನಿಮ್ಮ ಖರ್ಚುಗಳು ಜಾಸ್ತಿಯಾಗುವ ಸಾಧ್ಯತೆಯಿರುತ್ತದೆ. ಸ್ನೇಹಿತರು ನಿಜವಾಗಿಯೂ ಈ ಸಂದರ್ಭದಲ್ಲಿ ಸಹಾಯ ಮಾಡುವರು. ಸಮಾಜದಲ್ಲಿ ನಿಮ್ಮ ಪ್ರತಿಷ್ಠೆ ಹೆಚ್ಚಾಗುವುದು. ಶುಭದಿನ 30. ರಾಘವೇಂದ್ರ ಸ್ವಾಮಿಗಳ ಆರಾಧನೆ ಮಾಡಿರಿ.